

بسم اللهِ الرّحمٰن الرّحيم

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **22–10–2021** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ.

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ.

اَلْحَمْدُ لِلّٰهِ رَبِّ الْعٰلَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ. إِيَّاكَ نَعْبُدُ وَإِيَّاكَ نَسْتَعِيْنُ.

اِهْدِنَا الصِّرَاطَ الْمُسْتَقِيْمَ. صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಕಳೆದ ಖುತ್‌ಬದಲ್ಲಿ ಹಝ್ರತ್ ಉಮರ್(ರ)ರ ಶಹಾದತಿಗೆ ಸಂಬಂಧಿಸಿ ಹಝ್ರತ್ ಉಬೈದುಲ್ಲಾಹ್ ಬಿನ್ ಉಮರ್ ಮತ್ತು ಹಝ್ರತ್ ಉಸ್ಮಾನ್(ರ)ರ ನಡುವೆ ನಡೆದ ಭಿನ್ನಾಭಿಪ್ರಾಯ ಮತ್ತು ಜಗಳದ ಬಗ್ಗೆ ಪ್ರಸ್ತಾಪಿಸಿದ್ದೆ. ಹಝ್ರತ್ ಉಬೈದುಲ್ಲಾಹ್ ಬಿನ್ ಉಮರ್(ರ) ಮತ್ತು ಹಝ್ರತ್ ಉಸ್ಮಾನ್‌ರ ನಡುವೆ ಜಗಳ ನಡೆದ ಸಮಯದಲ್ಲಿ ಹಝ್ರತ್ ಉಸ್ಮಾನ್(ರ) ಖಲೀಫ ಆಗಿರಲಿಲ್ಲವೆಂದು ಈ ಕುರಿತು ಹೆಚ್ಚಿನ ಶೋಧನೆ ನಡೆಸಿದಾಗ ತಿಳಿದುಬಂದಿದೆ. ಮದೀನದಲ್ಲಿರುವ ಎಲ್ಲ ಕೈದಿಗಳನ್ನು ಮತ್ತು ಗುಲಾಮರನ್ನು ಕೊಂದು ಬಿಡಲು ಹಝ್ರತ್ ಉಬೈದುಲ್ಲಾಹ್ ಆರಂಭದಲ್ಲಿ ನಿರ್ಧರಿಸಿದ್ದರು. ಕೊನೆಗೆ ಮುಹಾಜಿರ್ ಸಹಾಬರ ಉಪದೇಶದಿಂದ ಅವರು ಈ ನಿರ್ಧಾರದಿಂದ ಹಿಂದೆ ಸರಿದರು. ಹಝ್ರತ್ ಉಸ್ಮಾನ್(ರ) ಖಲೀಫರಾಗಿ ಚುನಾಯಿತರಾದಾಗ ಹಝ್ರತ್ ಉಬೈದುಲ್ಲಾಹ್‌ರನ್ನು ಹಝ್ರತ್ ಉಸ್ಮಾನ್(ರ)ರ ಸನ್ನಿಧಿಗೆ ಕರೆತರಲಾಯಿತು. ಉಬೈದುಲ್ಲಾಹ್ ಬಿನ್ ಉಮರ್‌ರನ್ನು ವಧಿಸಬೇಕೆಂದು ಹಝ್ರತ್ ಅಲಿ(ರ) ಅಭಿಪ್ರಾಯಪಟ್ಟರು. ಆದರೆ ಇತರ ಮುಹಾಜಿರರು ಈ ಅಭಿಪ್ರಾಯವನ್ನು ವಿರೋಧಿಸುತ್ತಾ ಹೀಗೆ ಹೇಳಿದರು: ನಿನ್ನೆ ಉಮರ್(ರ) ವಧಿಸಲ್ಪಟ್ಟರು ಮತ್ತು ಇಂದು ಅವರ ಮಗನನ್ನು ಕೊಲ್ಲುವುದು ಅಸಹನೀಯವಾದ ಕಠೋರ ಕೃತ್ಯವಾಗುವುದು. ಈ ಸ್ಥಿತಿಯಲ್ಲಿ ತನ್ನ ಸಂಪತ್ತಿನಿಂದ ಹಝ್ರತ್ ಉಸ್ಮಾನ್(ರ) ವಧಿಸಲ್ಪಟ್ಟವರ ಪರಿಹಾರ ಧನವನ್ನು ಸಂದಾಯ ಮಾಡಿದರು.

ತಾರೀಕ್ ತಬರಿಯ ಪ್ರಕಾರ ಪ್ರತಿಕ್ರಿಯಾ ದಂಡನೆ ಎಂಬಂತೆ ಹಝ್ರತ್ ಉಬೈದುಲ್ಲಾಹ್‌ರನ್ನು ಹಝ್ರತ್ ಉಸ್ಮಾನ್(ರ) ಹುರ್ಮುಝಾನಿನ ಮಗನಿಗೆ ಒಪ್ಪಿಸಿದರು. ಅವರು ಉಬೈದಲ್ಲಾಹ್‌ರನ್ನು ಕೊಲ್ಲಲಿಕ್ಕಾಗಿ ಕೊಂಡು ಹೋಗುತ್ತಿರುವಾಗ ಉಬೈದುಲ್ಲಾಹ್‌ರನ್ನು ಬಿಟ್ಟುಬಿಡುವಂತೆ ಹುರ್ಮುಝಾನಿನ ಮಗನೊಡನೆ ಜನರು ಪದೇ ಪದೇ ವಿನಂತಿಸುತ್ತಿದ್ದರು. ಆಗ ಹುರ್ಮುಝಾನಿನ ಮಗನು ಅಲ್ಲಾಹ್ ಮತ್ತು ಜನರ ಪರವಾಗಿ ಉಬೈದುಲ್ಲಾಹ್‌ರನ್ನು ಬಿಟ್ಟುಬಿಟ್ಟರು. ಒಪ್ಪಂದದಲ್ಲಿರುವ ಕಾಫಿರನನ್ನು ಕೊಂದ ಮುಸ್ಲಿಮನಿಗೆ ಶಿಕ್ಷೆ ನೀಡಬಹುದೇ ಎಂಬ ಪ್ರಶ್ನೆಗೆ ಪರಿಹಾರ ಹೇಳುತ್ತಾ ಹಝ್ರತ್ ಮುಸ್ಲಿಹ್ ಮೌಊದ್(ರ) ಈ ಘಟನೆಯನ್ನು ವಿವರಿಸಿರುವರು. ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಮುಸ್ಲಿಮೇತರನನ್ನು ಕೊಂದ ಮುಸ್ಲಿಮ್ ಹಂತಕನಿಗೂ ಮರಣದಂಡನೆಯ ಶಿಕ್ಷೆಯನ್ನು ನೀಡುವುದು ಸಹಾಬರ ರೀತಿಯಾಗಿತ್ತು ಎಂದು ಈ ವರದಿಯಿಂದ ಸಾಬೀತಾಗುತ್ತದೆ.

ಹಝ್ರತ್ ಉಮರ್(ರ)ರ ವಿನಯವಂತಿಕೆಯ ಸ್ಥಿತಿ ಹೇಗಿತ್ತೆಂದರೆ, ನಿಧನದ ಸಮಯದಲ್ಲಿ ತನ್ನ ಮಗನೊಡನೆ ಅವರು ಹೀಗೆ ಹೇಳಿದ್ದರು: ನನಗೆ ಕಫನ್ ಮಾಡುವಾಗ ಮಧ್ಯ ಮಾರ್ಗವನ್ನು ಕೈಗೊಳ್ಳಬೇಕು. ಅಲ್ಲಾಹನು ನನ್ನ ಒಳಿತು ಬಯಸುವುದಾದರೆ, ಆ ಬಟ್ಟೆಗಿಂತ ಉತ್ತಮವಾದುದನ್ನು ನನಗೆ ತೊಡಿಸುವನು. ಅದಕ್ಕೂ ನಾನು ಅರ್ಹನಾಗಿರದಿದ್ದರೆ, ಅದನ್ನೂ ಬೇಗನೇ ಕಿತ್ತೆಗೆಯುವನು. ಅದೇ ರೀತಿಯಲ್ಲಿ ನನ್ನ ಖಬರಿನ ಬಗ್ಗೆಯೂ ಮಧ್ಯಮಾರ್ಗವನ್ನು ಸ್ವೀಕರಿಸಬೇಕು. ಅಲ್ಲಾಹನು ನನಗೆ ಒಳಿತನ್ನು ಬಯಸುವುದಾದರೆ ಅದನ್ನು ನನ್ನ ದೃಷ್ಟಿ ತಲುಪುವ ವರೆಗೆ ವಿಶಾಲಗೊಳಿಸುವನು. ಇಲ್ಲದಿದ್ದರೆ ನನ್ನ ಎಲುಬುಗಳು ಮುರಿಯುವ ರೀತಿಯಲ್ಲಿ ಅದನ್ನು ಸಂಕುಚಿತಗೊಳಿಸುವನು. ನನ್ನ ಜನಾಝದೊಂದಿಗೆ ಸ್ತ್ರೀಯರು ಬರದಿರಲಿ. ನನ್ನಲ್ಲಿ ಇಲ್ಲದ ಸಂಗತಿಯನ್ನು ಹೊಗಳಿ ಹೇಳಬೇಡಿರಿ. ಏಕೆಂದರೆ ನನ್ನ ಬಗ್ಗೆ ಅಲ್ಲಾಹನು ಹೆಚ್ಚು ಬಲ್ಲನು. ನನ್ನ ಜನಾಝದೊಂದಿಗೆ ಹೊರಡುವಾಗ ವೇಗವಾಗಿ ಹೆಜ್ಜೆ ಹಾಕಿರಿ. ದೇವನ ಸನ್ನಿಧಾನದಲ್ಲಿ ನನಗೆ ಒಳಿತಿದೆಯೆಂದಾದರೆ ಅದು ಬೇಗನೆ ನನಗೆ ಸಿಗುವಂತಾಗಲಿ. ಅದಲ್ಲದಿದ್ದರೆ ನೀವು ಹೊತ್ತಿರುವ ಕೆಡುಕಿನ ಭಾರವನ್ನು ನೀವು ಬೇಗನೇ ಕೆಳಗಿಳಿಸುವಂತಾಗಲಿ. ಜನಾಝಕ್ಕೆ ಸ್ನಾನ ಮಾಡಿಸುವಾಗ ಕಸ್ತೂರಿ ಹಚ್ಚಬಾರದು ಎಂದೂ ಹಝ್ರತ್ ಉಮರ್(ರ) ವಸಿಯ್ಯತ್ ಮಾಡಿದ್ದಾಗಿ ಪ್ರಸ್ತಾಪ ಸಿಗುತ್ತದೆ.

ಹಝ್ರತ್ ಮುಸ್ಲಿಹ್ ಮೌಊದ್(ರ) ಇದರ ಬಗ್ಗೆ ಹೇಳುತ್ತಾರೆ: ಹಝ್ರತ್ ಉಮರ್‌ರಂತಹ ವ್ಯಕ್ತಿ ತನ್ನ ಸಂಪೂರ್ಣ ಜೀವಿತವನ್ನು ಇಸ್ಲಾಂ ಧರ್ಮದ ಬಗ್ಗೆಗಿನ ಚಿಂತೆ ಮತ್ತು ದುಃಖದಲ್ಲಿ ಕಳೆದಿದ್ದರು. ಅವರು ಪ್ರತಿಯೊಂದು ಸಂದರ್ಭದಲ್ಲಿ ಅತ್ಯುನ್ನತ ತ್ಯಾಗಗಳನ್ನು ಮಾಡಿದ್ದರು. ಬಾಹ್ಯವಾಗಿ ಅವರ ತ್ಯಾಗಗಳು ಹಝ್ರತ್ ಅಬೂಬಕರ್(ರ)ರ ತ್ಯಾಗದ ಮಟ್ಟಕ್ಕೆ ತಲುಪಿರಲಿಲ್ಲವಾದರೂ ನಿರ್ಧಾರ ಮತ್ತು ಸದುದ್ದೇಶದ ದೃಷ್ಟಿಯಲ್ಲಿ ಅವರಿಗೆ ಸಮಾನವಾಗಿತ್ತು. ಹಝ್ರತ್ ಅಬೂಬಕರ್(ರ) ನಿಧನರಾದಾಗ ಹಝ್ರತ್ ಉಮರ್(ರ)ರ ಕಣ್ಣುಗಳು ತೇವಗೊಂಡುವು. ಅವರು ಹೇಳಿದರು: ಅಲ್ಲಾಹನು ಅಬೂಬಕರ್(ರ)ರನ್ನು ಅನುಗ್ರಹಿಸಲಿ. ಅವರಿಗಿಂತ ಮುಂದಾಗಲು ನಾನು ಅನೇಕ ಬಾರಿ ಪ್ರಯತ್ನಿಸಿದ್ದೆ. ಆದರೆ ನನಗೆ ಯಶಸ್ಸು ಲಭಿಸಲಿಲ್ಲ. ಒಂದು ಬಾರಿ ಹಝ್ರತ್ ಪೈಗಂಬರ್(ಸ) ಸಂಪತ್ತನ್ನು ತರಲು ನಮ್ಮೊಡನೆ ಹೇಳಿದರು. ನಾನು ನನ್ನ ಬಳಿಯಿದ್ದ ಸಂಪತ್ತಿನ ಅರ್ಧವನ್ನು ತಂದೆನು. ಇಂದು ನಾನು ಅಬೂಬಕರ್‌ಗಿಂತ ಮಿಗಿಲಾಗುವೆನು ಎಂದು ಭಾವಿಸಿದ್ದೆ. ಆದರೆ ಹಝ್ರತ್ ಅಬೂಬಕರ್(ರ) ನನಗಿಂತ ಮುಂಚೆ ಅಲ್ಲಿಗೆ ತಲುಪಿದ್ದರು. ಹಝ್ರತ್ ಅಬೂಬಕರ್(ರ)ರೊಂದಿಗೆ ಹಝ್ರತ್ ಪೈಗಂಬರ್(ಸ)ರಿಗೆ ನಿಕಟ ಸಂಬಂಧವೂ ಇತ್ತು. ಅವರು ಏನನ್ನೂ ಬಿಟ್ಟು ಬಂದಿರಲಿಕ್ಕಿಲ್ಲವೆಂದು ಅವರ ಬಗ್ಗೆ ಪೈಗಂಬರ್(ಸ)ರಿಗೆ ಚೆನ್ನಾಗಿ ಗೊತ್ತಿತ್ತು. ಆದ್ದರಿಂದ ಹಝ್ರತ್ ಪೈಗಂಬರ್(ಸ) ಅವರೊಂದಿಗೆ ಕೇಳಿದರು: ಅಬೂಬಕರ್, ಮನೆಯಲ್ಲಿ ಏನನ್ನು ಬಿಟ್ಟುಬಂದಿದ್ದೀರಿ? ಅವರು ಹೇಳಿದರು: ಮನೆಯಲ್ಲಿ ಅಲ್ಲಾಹ್ ಮತ್ತು ಪ್ರವಾದಿಯ ಹೆಸರನ್ನು ಬಿಟ್ಟು ಬಂದಿದ್ದೇನೆ. ಈ ಘಟನೆಯನ್ನು

ಸ್ಮರಿಸುತ್ತಾ ಹಝ್ರತ್ ಉಮರ್(ರ) ಅಳುತ್ತಾ ಹೇಳುತ್ತಾರೆ: ಆಗಲೂ ನನಗೆ ಅವರಿಗಿಂತ ಮಿಗಿಲಾಗಲು ಸಾಧ್ಯವಾಗಲಿಲ್ಲ. ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಇದಾಗಿದ್ದುವು ಅವರ ತ್ಯಾಗಗಳು. ಹಝ್ರತ್ ಅಬೂಬಕರ್(ರ) ಮೊದಲು ಸಹ ನೀಡುತ್ತಿದ್ದರು. ಆದರೆ ವಿಶೇಷ ಸಂದರ್ಭ ಬಂದಾಗ ಎಲ್ಲವನ್ನೂ ತಂದು ಮುಂದಿಟ್ಟರು. ಒಂದೆಡೆ ಇಂತಹ ಜನರು, ಮತ್ತೊಂದೆಡೆ ಕೆಲವರಿಗೆ ತನ್ನ ಸಂಪತ್ತಿನ ಹತ್ತನೇ ಒಂದು ಭಾಗವನ್ನು ಕೂಡ ತ್ಯಾಗಮಾಡುವ ಸಂದರ್ಭ ಸಿಗುವುದಿಲ್ಲ. ಆದರೂ ನಾವು ಲೂಟಿಯಾಗಲ್ಪಟ್ಟೆವು ಎಂದು ಹೇಳುತ್ತಾರೆ.

ಹಝ್ರತ್ ಉಮರ್(ರ)ರ ಮರಣ ಸಮೀಪವಾದಾಗ, ಅವರ ಕಣ್ಣುಗಳು ಪದೇ ಪದೇ ತೇವಗೊಳ್ಳುತ್ತಿದ್ದುವು ಮತ್ತು ಹೀಗೆ ಹೇಳುತ್ತಿದ್ದರು: ನನ್ನ ದೇವಾ, ನಾನು ಯಾವುದೇ ಪ್ರತಿಫಲಕ್ಕೆ ಅರ್ಹನಲ್ಲ. ನಾನು ಶಿಕ್ಷೆಯಿಂದ ಪಾರಾಗಲಿ ಎಂದು ಮಾತ್ರ ನಾನು ಬಯಸುತ್ತೇನೆ.

ಹಝ್ರತ್ ಉಮರ್(ರ)ರ ಜನಾಝ ನಮಾಝ್ ಹಝ್ರತ್ ಸುಹೈಬ್ ನಿರ್ವಹಿಸಿದರು. ಅವರನ್ನು ಖಬರಿಗೆ ಇಳಿಸುವವರಲ್ಲಿ ಹಝ್ರತ್ ಉಸ್ಮಾನ್(ರ), ಹಝ್ರತ್ ಸಈದ್ ಬಿನ್ ಝೈದ್(ರ), ಹಝ್ರತ್ ಅಲಿ(ರ), ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ), ಹಝ್ರತ್ ಸಅದ್ ಬಿನ್ ಅಬೀ ವಖಾಸ್(ರ), ಹಝ್ರತ್ ತಲ್‌ಹ(ರ) ಮತ್ತು ಇತರ ಶ್ರೇಷ್ಠ ಸಹಾಬರು ಇದ್ದರು. ಮರಣ ಸಮಯದಲ್ಲಿ ಅವರ ಪ್ರಾಯ 53 ವಯಸ್ಸಿನಿಂದ 65 ವಯಸ್ಸು ತನಕವಿತ್ತೆಂದು ವಿವಿಧ ವರದಿಗಳಲ್ಲಿ ವಿವರಿಸಲಾಗಿದೆ.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಸಜ್ಜನರ ಸಮೀಪ ದಫನ್ ಆಗುವುದು ಸಹ ಒಂದು ವರದಾನವಾಗಿದೆ. ಸಂಪೂರ್ಣ ಅಸಕ್ತಿಯಿಂದ ಅಲ್ಲಾಹನೊಂದಿಗೆ ಹೊಂದಿಕೊಳ್ಳುವ ವ್ಯಕ್ತಿಯನ್ನು ಅಲ್ಲಾಹನು ವ್ಯರ್ಥಗೊಳಿಸುವುದಿಲ್ಲ. ಅಬೂಬಕರ್ ಮತ್ತು ಉಮರರ ಸತ್ಯಸಂಧತೆ ಹಾಗೂ ನಿಷ್ಠೆಯ ಮಟ್ಟ ಬಹಳ ಉನ್ನತವಾಗಿತ್ತು. ಅವರಿಬ್ಬರೂ ಬಹಳ ಅನುಗ್ರಹೀತ ಸ್ಥಳದಲ್ಲಿ ದಫನ್ ಆದರು. ಮೂಸಾ ಮತ್ತು ಈಸಾ ಜೀವಂತವಾಗಿದ್ದರೆ, ಅವರು ಪೂರ್ಣ ಆಸಕ್ತಿಯಿಂದ ಅಲ್ಲಿ ದಫನ್ ಮಾಡಲ್ಪಡಲು ಬಯಸುತ್ತಿದ್ದರು.

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ)ರ ಸಮೀಪ ಜಾಗ ಸಿಗಬೇಕು ಎಂಬ ವ್ಯಾಕುಲತೆ ಹಝ್ರತ್ ಉಮರ್(ರ)ರಿಗೆ ಮರಣ ಸಮಯದಲ್ಲಿ ಬಹಳವಿತ್ತು. ಲೋಕದಲ್ಲಿ ಯಾರೂ ನಡೆಸಿರದಂತಹ ಆಡಳಿತವನ್ನು ಹಝ್ರತ್ ಉಮರ್(ರ) ನಡೆಸಿದರು ಎಂದು ಅವರ ಬಗ್ಗೆ ಕ್ರೈಸ್ತ ಚರಿತ್ರೆಗಾರರು ಕೂಡ ಬರೆಯುತ್ತಾರೆ. ಕ್ರೈಸ್ತ ಚರಿತ್ರೆಗಾರರು ಹಝ್ರತ್ ಪೈಗಂಬರ್(ಸ)ರನ್ನು ಬೈಯ್ಯುತ್ತಾರೆ. ಆದರೆ ಹಝ್ರತ್ ಉಮರ್(ರ)ರನ್ನು ಹೊಗಳುತ್ತಾರೆ. ಅಂತಹ ವ್ಯಕ್ತಿ, ಸದಾ ಹಝ್ರತ್ ಪೈಗಂಬರ್(ಸ)ರ ಸಹವಾಸದಲ್ಲಿ ಇದ್ದ ವ್ಯಕ್ತಿ ಮರಣ ಸಮಯದಲ್ಲೂ ಹಝ್ರತ್ ಪೈಗಂಬರ್(ಸ)ರ ಖಬರಿನ ಸಮೀಪ ಜಾಗ ಸಿಗಬೇಕೆಂಬ ಅಭಿಲಾಷೆಯನ್ನು ಇರಿಸುತ್ತಾರೆ.

ಸಹೀಹ್ ಮುಸ್ಲಿಮ್ ಮತ್ತು ತಿರ್ಮಿಧಿಯ ವರದಿಯ ಪ್ರಕಾರ ಮರಣ ಸಮಯದಲ್ಲಿ ಹಝ್ರತ್ ಉಮರ್(ರ)ರಿಗೆ 63 ವಯಸ್ಸಾಗಿತ್ತು. ಮರಣ ಸಮಯದಲ್ಲಿ ಹಝ್ರತ್ ಪೈಗಂಬರ್(ಸ)ರ ಪ್ರಾಯ 63 ಆಗಿತ್ತು, ಹಝ್ರತ್ ಅಬೂಬಕರ್(ರ) ಮೃತಪಟ್ಟಾಗ ಅವರಿಗೆ 63 ವಯಸ್ಸಾಗಿತ್ತು ಮತ್ತು ಹಝ್ರತ್ ಉಮರ್(ರ)ರ ಪ್ರಾಯ ಸಹ ಮರಣ ಸಮಯದಲ್ಲಿ 63 ಆಗಿತ್ತು ಎಂದು ಹಝ್ರತ್ ಅನಸ್ ಬಿನ್ ಮಾಲಿಕ್ ವರದಿ ಮಾಡುತ್ತಾರೆ.

ಹಝ್ರತ್ ಉಮರ್(ರ)ರ ಪರಿಶುದ್ಧ ಮೃತದೇಹದ ತಲೆಭಾಗದಲ್ಲಿ ನಿಂತುಕೊಂಡು ಹಝ್ರತ್ ಅಲಿ(ರ) ಹೇಳಿದರು: ನೀವು ಮಾಡಿದಂತಹ ಕೃತ್ಯಗಳನ್ನು ಮಾಡಬೇಕೆಂಬ ನೆಲೆಯಲ್ಲಿ ನನಗೆ ನಿಮಗಿಂತ ಪ್ರಿಯರಾದ ಬೇರೆ ವ್ಯಕ್ತಿಯಿಲ್ಲ. ಈ ಚಾದರದಲ್ಲಿ ಹೊದಿಯಲ್ಪಟ್ಟ ವ್ಯಕ್ತಿಗಿಂತ ಪ್ರಿಯ ವ್ಯಕ್ತಿ ನನಗೆ ಇಹಲೋಕದಲ್ಲಿ ಬೇರೆ ಯಾರೂ ಇಲ್ಲ. ಹಝ್ರತ್ ಪೈಗಂಬರ್(ಸ) ಅನೇಕ ಬಾರಿ ಹೀಗೆ ಹೇಳಿದ್ದಾಗಿ ನಾನು ಕೇಳಿದ್ದೇನೆ: ನಾನು, ಅಬೂಬಕರ್ ಮತ್ತು ಉಮರ್ ಪ್ರವೇಶಿಸಿದೆವು; ನಾನು ಮತ್ತು ಅಬೂಬಕರ್ ಹಾಗೂ ಉಮರ್ ಹೊರಟೆವು. ಎಂದರೆ, ಹೀಗೆ ವಿವಿಧ ವಾಕ್ಯಗಳನ್ನು ಹೇಳುತ್ತಿದ್ದರು. (ಹೀಗೆ ಆರಂಭಿಸುತ್ತಾ ಅನೇಕ ಘಟನೆಗಳನ್ನು ವಿವರಿಸುತ್ತಿದ್ದರು).

ಹಝ್ರತ್ ಉಮರ್(ರ) ನಿಧನರಾದಾಗ ಹಝ್ರತ್ ಅಬ್ದುಲ್ಲಾಹ್ ಬಿನ್ ಮಸ್‌ಊದ್(ರ) ಹೇಳಿದರು: ಅವರು ಇಸ್ಲಾಮಿಗಾಗಿ ಒಂದು ಸುದೃಢವಾದ ಕೋಟೆಯಾಗಿದ್ದರು. ಅವರ ಅರಿವನ್ನು ತಕ್ಕಡಿಯ ಒಂದು ತಟ್ಟೆಯಲ್ಲಿ ಇರಿಸಿ ಮತ್ತೊಂದು ತಟ್ಟೆಯಲ್ಲಿ ಉಳಿದ ಎಲ್ಲ ಮನುಷ್ಯರ ಅರಿವನ್ನು ಇರಿಸಿದರೆ ಹಝ್ರತ್ ಉಮರ್(ರ)ರ ತಟ್ಟೆ ಭಾರವುಳ್ಳದ್ದಾಗಿರುವುದು. ಹಝ್ರತ್ ಹುದೈಫ(ರ) ಹೇಳುತ್ತಾರೆ: ಹಝ್ರತ್ ಉಮರ್(ರ)ರ ಕಾಲಘಟ್ಟದ ಇಸ್ಲಾಮಿನ ಉದಾಹರಣೆ, ನಿರಂತರವಾಗಿ ಅಭಿವೃದ್ಧಿಯ ಮಾರ್ಗದಲ್ಲಿ ಹೋಗುತ್ತಿರುವ ಒಬ್ಬ ವ್ಯಕ್ತಿಯ ಹಾಗೆ ಆಗಿತ್ತು ಎಂದು ಹೇಳಬಹುದು. ಹಝ್ರತ್ ಅಬ್ದುಲ್ಲಾಹ್ ಬಿನ್ ಸಲಾಂ ಹೇಳುತ್ತಾರೆ: ಹಝ್ರತ್ ಉಮರ್(ರ) ಸತ್ಯದ ಪರವಾಗಿ ಉದಾರಿಯೂ ಮತ್ತು ಅಸತ್ಯದ ಪರವಾಗಿ ಜಿಪುಣರೂ ಆಗಿದ್ದರು. ಹಝ್ರತ್ ಉಮರ್(ರ) ನಿಧನರಾದಾಗ ಸಈದ್ ಬಿನ್ ಝೈದ್(ರ) ಅಳುತ್ತಾ ಹೇಳಿದರು: ಹಝ್ರತ್ ಉಮರ್(ರ)ರ ಮರಣದಿಂದ ಇಸ್ಲಾಮಿಗೆ ಉಂಟಾದ ಹಾನಿಯನ್ನು ಕೊನೆಗಾಲದ ವರೆಗೂ ಭರ್ತಿ ಮಾಡಲು ಸಾಧ್ಯವಲ್ಲ.

ಹಝ್ರತ್ ಉಮರ್(ರ) ಬೇರೆ ಬೇರೆ ಸಮಯಗಳಲ್ಲಿ ಹತ್ತು ವಿವಾಹಗಳನ್ನು ಮಾಡಿದ್ದರು. ಅವರಿಗೆ 9 ಪುತ್ರರು ಮತ್ತು 4 ಪುತ್ರಿಯರು ಇದ್ದರು.

ಪ್ರಸಿದ್ಧ ಪೌರಸ್ತ್ಯ ಲೇಖಕ ಎಡ್ವರ್ಡ್ ಗಿಬ್ಬನ್ ಬರೆಯುತ್ತಾರೆ: ಹಝ್ರತ್ ಉಮರ್(ರ)ರ ದೇವಭಕ್ತಿ ಮತ್ತು ವಿನಯವಂತಿಕೆ ಹಝ್ರತ್ ಅಬೂಬಕರ್(ರ)ಗಿಂತ ಕಡಿಮೆಯೇನೂ ಆಗಿರಲಿಲ್ಲ. ಅವರ ಆಹಾರದಲ್ಲಿ ಜೋಳದ ರೊಟ್ಟಿ ಮತ್ತು ಖರ್ಜೂರಗಳೇ ಇರುತ್ತಿದ್ದುವು. ನೀರು ಅವರ ಪಾನೀಯವಾಗಿತ್ತು.

ಮೈಕಲ್ ಎಚ್. ಹಾರ್ಟ್ ತನ್ನ ಪುಸ್ತಕವಾದ "ದಿ ಹಂಡ್ರೆಡ್"ನಲ್ಲಿ ಹಝ್ರತ್ ಉಮರ್(ರ)ರ ಪ್ರಸ್ತಾಪ 52ನೇ ನಂಬರ್‌ನಲ್ಲಿ ಮಾಡಿರುವರು. ಅವರು ಬರೆಯುತ್ತಾರೆ: ಹಝ್ರತ್ ಉಮರ್ ಮುಸ್ಲಿಮರ ಅತ್ಯಂತ ಶ್ರೇಷ್ಠ ಖಲೀಫರಾಗಿದ್ದರು ಎಂದು ಹೇಳಬಹುದು. ಉಮರ್ ಕ್ರಿಸ್ತ ಶಕ 634ರಲ್ಲಿ ಖಲೀಫರಾದರು ಮತ್ತು ಕ್ರಿ.ಶ. 644 ತನಕ ಖಿಲಾಫತ್ ಸ್ಥಾನದಲ್ಲಿದ್ದರು. ಹಝ್ರತ್ ಉಮರರ ಹತ್ತು ವರ್ಷಗಳ ಖಿಲಾಫತ್ ಕಾಲಘಟ್ಟದಲ್ಲೇ ಅರೇಬಿಯರು ಅತ್ಯಂತ ಪ್ರಮುಖ ವಿಜಯಗಳನ್ನು ಗಳಿಸಿದ್ದರು. ಹಝ್ರತ್ ಉಮರರ ವಿಜಯಗಳ ವಿಸ್ತಾರ ಎಷ್ಟು ಪ್ರಮುಖವೋ ಅಷ್ಟೇ ಅವರ ವಿಜಯಗಳ

ನೆಲೆನಿಲ್ಲುವಿಕೆ ಮತ್ತು ಭದ್ರತೆಯೂ ಮುಖ್ಯವಾದುದಾಗಿದೆ. ಉಮರರ ವಿಜಯಗಳು ನಿಸ್ಸಂಶಯವಾಗಿಯೂ ಪ್ರಭಾವಶಾಲಿಗಳಾಗಿವೆ. ಮುಹಮ್ಮದ್ ಪೈಗಂಬರ್(ಸ)ರ ನಂತರ ಅವರು ಇಸ್ಲಾಮಿನ ಪ್ರಚಾರದಲ್ಲಿ ಪ್ರಧಾನ ವ್ಯಕ್ತಿಯಾಗಿದ್ದರು. ಉಮರರ ಕಾಲಘಟ್ಟದಲ್ಲಿ ಅರೇಬಿಯರ ವಿಜಯಗಳನ್ನು ಶಾರ್ಲೀಮನ್ ಮತ್ತು ಜೂಲಿಯಸ್ ಸೀಸರಿನ ವಿಜಯಗಳಿಗೆ ಹೋಲಿಸಿದರೆ, ಗಾತ್ರ ಮತ್ತು ಸಮಯ ಮಿತಿಯ ದೃಷ್ಟಿಯಲ್ಲಿ ಅವುಗಳು ಇವರಿಬ್ಬರ ವಿಜಯಗಳಿಗಿಂತ ಬಹಳ ಹೆಚ್ಚು ಪ್ರಧಾನವಾಗಿವೆ.

ಪ್ರೊಫೆಸರ್ ಫಿಲಿಪ್ ಕೆ.ಎ.ಟಿ. ಬರೆಯುತ್ತಾರೆ: ಸರಳ, ಸಂತೃಪ್ತ ಮತ್ತು ಪೈಗಂಬರ್(ಸ)ರ ಕ್ರಿಯಾಶೀಲ ಮತ್ತು ಯೋಗ್ಯ ಉತ್ತರಾಧಿಕಾರಿಯಾದ ಉಮರ್(ರ) ಉದ್ದ ಮತ್ತು ಗಟ್ಟಿ ಮೈಕಟ್ಟಿನ ವ್ಯಕ್ತಿಯಾಗಿದ್ದರು. ಅವರು ಒಬ್ಬ ಗ್ರಾಮೀಣ ವಾಸಿಯಂತೆ ಸರಳತೆಯಿಂದ ಜೀವನವನ್ನು ಸಾಗಿಸಿದರು. ಅವರ ಉನ್ನತ ಮತ್ತು ಶ್ರೇಷ್ಠ ನಡತೆ ಹಾಗೂ ಸ್ವಭಾವವು ಮನಸ್ಸಾಕ್ಷಿಯುಳ್ಳ ಎಲ್ಲ ಉತ್ತರಾಧಿಕಾರಿಗಳು ಅನುಸರಿಸಬೇಕಾದ ಮಾದರಿಯಾಗಿಬಿಟ್ಟಿದೆ.

(ಹಝ್ರತ್ ಉಮರ್(ರ)ರ ಪ್ರಸ್ತಾಪ ಮುಂದುವರೆಯುವುದು ಎಂದು ಹೇಳಿದ ನಂತರ ಹುಝೂರ್ ಈ ಕೆಳಗಿನ ದಿವಂಗತರ ಬಗ್ಗೆ ಪ್ರಸ್ತಾಪಿಸುತ್ತಾ ಅವರ ಜನಾಝ ಗಾಇಬ್ ನಿರ್ವಹಿಸುವುದಾಗಿ ಘೋಷಿಸಿದರು.)

ಮೊದಲನೇ ಜನಾಝ ಡಾಕ್ಟರ್ ಮಿರ್ಝಾ ಮುಬಶ್ಶಿರ್ ಅಹ್ಮದ್ ಸಾಹಿಬ್‌ರ ಪತ್ನಿಯಾಗಿದ್ದ ಸನ್ಮಾನ್ಯ ಸಾಹಿಬ್‌ಝಾದಿ ಆಸಿಫ ಮಸ್‌ಊದ ಬೇಗಂ ಸಾಹಿಬ ಅವರದ್ದಾಗಿದೆ. ಅವರು ಹಝ್ರತ್ ಮಸೀಹ್ ಮೌಊದ್‌ರ ಮೊಮ್ಮಗಳು ಹಝ್ರತ್ ನವಾಬ್ ಮುಬಾರಕ ಬೇಗಂ ಸಾಹಿಬ ಹಾಗೂ ಹಝ್ರತ್ ನವಾಬ್ ಮುಹಮ್ಮದ್ ಅಲಿ ಖಾನ್ ಸಾಹಿಬ್‌ರ ಅತ್ಯಂತ ಕಿರಿಯ ಪುತ್ರಿಯಾಗಿದ್ದರು. ನನಗೆ ಅವರೊಂದಿಗೆ ಅನೇಕ ಸಂಬಂಧಗಳಿವೆ. ಅವರು ನನ್ನ ಅಜ್ಜಿಯ ಸಹೋದರಿಯಾಗಿದ್ದರು. ಅವರು ನನ್ನ ಚಿಕ್ಕಮ್ಮ ಸಹ ಆಗಿದ್ದರು. ಈ ಎಲ್ಲ ಸಂಬಂಧವಿದ್ದರೂ ಅವರು ಖಿಲಾಫತಿಗೆ ವಿಧೇಯರಾಗಿದ್ದರು. ಅವರು ಒಬ್ಬ ಪುತ್ರನನ್ನು ಮತು ನಾಲ್ವರು ಪುತ್ರಿಯರನ್ನು ಅಗಲಿರುವರು. ಅವರು ಬಡವರ, ಅಧೀನದಲ್ಲಿರುವವರ, ಸೇವಕರ, ಸಂಬಂಧಿಕರ ಬಗ್ಗೆ ಬಹಳ ಕಾಳಜಿ ವಹಿಸುತ್ತಿದ್ದರು. ಅಲ್ಲಾಹನಿಗೆ ಸಲ್ಲಬೇಕಾದ ಮತ್ತು ಸೃಷ್ಟಿಗಳಿಗೆ ಸಲ್ಲಬೇಕಾದ ಹಕ್ಕುಗಳನ್ನು ಅವರು ಈಡೇರಿಸುತ್ತಿದ್ದರು. ಖಿಲಾಫತಿಗೆ ವಿಧೇಯ ಮತ್ತು ಖಿಲಾಫತಿನ ಪ್ರೇಮಿಯಾಗಿದ್ದರು. ಬಹಳ ಉದಾರಿ ಸ್ತ್ರೀಯಾಗಿದ್ದರು, ಆರಾಧನೆಗಳಲ್ಲಿ ಮತ್ತು ಧನತ್ಯಾಗಗಳಲ್ಲಿ ಅವರು ಬಹಳ ಮುಂದಿದ್ದರು.

ಎರಡನೇ ಜನಾಝ ಖಝಕಿಸ್ತಾನದ ಮಾಜಿ ಅಮೀರ್ ಜಮಾಅತ್ ರೋಲಾನ್ ಸಾಇನ್ ಬಾಇಫ್ ಸಾಹಿಬ್‌ರ ಪತ್ನಿಯಾಗಿದ್ದ ಸನ್ಮಾನ್ಯ ಕ್ಲಾರಾ ಆಪಾ ಸಾಹಿಬರದ್ದಾಗಿದೆ.

ಮೂರನೇ ಜನಾಝ ವಿಂಗ್ ಕಮಾಂಡರ್ ಅಬ್ದುರ್ರಶೀದ್ ಸಾಹಿಬ್‌ರದ್ದಾಗಿದೆ. ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್(ರಹ್ಮಹುಲ್ಲಾಹ್) ಅಬ್ದುರ್ರಶೀದ್ ಸಾಹಿಬ್‌ರನ್ನು ಲಿಬಿಯದ ಮೊದಲ ಅಮೀರ್ ಜಮಾಅತಾಗಿ ನಿಶ್ಚಯಿಸಿದ್ದರು.

ನಾಲ್ಕನೇ ಜನಾಝ ಅಮೇರಿಕದ ಕರೀಂ ಅಹ್ಮದ್ ನಈಮ್ ಸಾಹಿಬ್‌ರ ಪತ್ನಿಯಾದ ಸನ್ಮಾನ್ಯ ಝುಬೈದ ಬೇಗಮ್ ಸಾಹಿಬ ಅವರದ್ದಾಗಿದೆ.

ಐದನೇ ಜನಾಝ ಹಫೀಝ್ ಅಹ್ಮದ್ ಘುಮನ್ ಸಾಹಿಬ್‌ರದ್ದಾಗಿದೆ.

(ಇವರೆಲ್ಲರ ಮಗ್‌ಫಿರತ್ ಮತ್ತು ಉನ್ನತ ಪದವಿಗಳಿಗಾಗಿ ಹುಝೂರ್ ದುಆ ಮಾಡಿದರು.)

*****

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَا هَادِيَ لَهٗ ـ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَآءِ ذِي الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.

***Friday Sermon delivered by Hadrath Khaleefatul Masih Al Khamis*** *(atba)*

*At, Masjid Mubarak, Islamabad, Tilford, UK, On 22-10-2021*

**Summarized by** *Majlis Ansarullah Bharat*

***Kannada Translation****:* Moulavi Inamullah for Kannada Desk, Qadian

***Reviewed by****:* M.P Ibrahim |***Layout****:* U Basheer Ahmad

***Published By****:* Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon